

ಹಂಪಿಯಲ್ಲಿರುವ ಕಲ್ಲಿನ ರಥವನ್ನು ಹೋಲುವ ಕೂಡ್ಲಿಗಿಯ ರಥ






ಕರೀತಾರ. ಎರಡ್ ಸಾವ್ರ ವರ್ಷದ್ ಹಳೇದ್ ಆರ್ ಅಡಿ ಉದ್ದ ಗುಹಿ ತರ ಐತಿ. ಮಣ್ಣಿನ್ ಕಿಂಡ್ಯಾಗ ಒಬ್ರು ಹೋಗಿ ಬರವಷ್ಟು ಜಾಗ ಐತಿ ಮಕ್ಳು ಮರಿ ಆಡೋ ಈ ಸ್ಥಳದಾಗ ಶಿಲಾಯುಗದ ಸ್ಮಾರಕ ಸತಿಗೂ ಆದವು.

ಶ್ರೀ 1008 ಸಿದ್ಧಲಿಂಗ ರಾಜ ದೇಶಿ ಕೇಂದ್ರ ಜಗದ್ಗುರು ಇವರ ಸಾಕ್ಷಿಯಾಗಿ ಕಟ್ಟಿದ ಬಳಪದ ಕಲ್ಲಿನ್ ಗೋಪುರ ಹತ್ತಿ ಟಿನ್ ಗಟ್ಲೆ ಎಣ್ಣೆ ಹಾಕ್ತರ. ಹಿಂಗ್ ಎಣ್ಣಿ ಹಾಕಕರ ಒಬ್ರು ಕಾಲು ಜಾರಿ ಬಿದ್ದಿರೋ ಇತಿಹಾಸ ಇಲ್ಲ. ಇದೇ ದೈವ ಪವಾಡ.

ಬ್ರಿಟಿಷರ ಶಿಕ್ಷೆಗೆ ಗುರಿಯಾದ ಸೈನಿಕನಿಗೊಂದ್ ದೇವಸ್ಥಾನ ಕಟ್ಟ್ಯಾರ. ಕೂಡ್ಲಿಗಿ ತಾಲೂಕಿನ ಅಮ್ಮನ ಕೆರೆಯಲ್ಲಿ ಸಂಪೂರ್ಣ ಮದ್ಯಪಾನ ನಿಷೇಧ. ಪ್ರತಿ ವರ್ಷ ಕೋಟಿಗಟ್ಟಲೆ ವ್ಯವ್ಹಾರ ನಡಿಯೋ ಕೆಂಪ್ ಹುಣ್ಸೆ ಹಣ್ಣ್ ಸಿಗ್ತಾವ. ವೈಜ್ಞಾನಿಕತೆಯ ವಿಜ್ಞಾನಿಗಳು ನಮ್ ಊರಾಗ ಅದರ.

ಶಿವರಾತ್ರಿ ಅಂದ್ರ ಶಿವ ಶಿವ ಅನ್ನಂಗ ಬಿಸಿಲು ಇರ್ತದ. ಕರಡಿಹಳ್ಳಿ ನರಸಿಂಹಗಿರಿ ಮಧ್ಯದಾಗ ಗಂಗೆ ಪ್ರತ್ಯಕ್ಷ ಆಗ್ತಾಳ. ಸುಡಾ ಬಿಸ್ಲಾಗ ಗಂಗವ್ವ ಧರೇನಾ ತಂಪ್ ಮಾಡ್ತಾಳ. ಶಿವನ್ ಭೇಟಿ ಮಾಡಕ ಬರ್ತಾಳಾ.

ಎಲ್ಲ ದೇವ್ರು ಅಲಂಕಾರ ಪ್ರಿಯರಾದ್ರ, ಈಕೆ ಹಣ ಪ್ರಿಯೆ. ದೇವಿ ಗಾಣಗಟ್ಟಿ ಮಾಯಮ್ಮ. ಈಕೆಯ ಭಕ್ತ್ರಿಗೆ ಸಂತಾನ ಭಾಗ್ಯ, ಮದ್ವಿ ಭಾಗ್ಯ ಕರುಣಿಸೊ ತಾಯಿಯ ಗೋಪುರ 125 ಅಡಿ ಐತಿ. ಕ್ರಿ.ಪೂ 2000 ಇಸ್ವಿಯ ರಕ್ಕಸ ಗಲ್ಲು, ಮಾನವ ಕಲ್ಲು ಗಂಡ್ಸು, ಹೆಂಗ್ಸ್ ಮನುಷ್ಯನ್ ಆಕೃತಿ ಹೋಲ್ತವು.

ಗಣೇಶನ್ ಹಬ್ಬಾಗ್ ನಾವ್ ಯಾರಿಗ್ ಪೂಜಿ ಮಾಡ್ತೀವಿ ಹೇಳ್ರಿ, ಇನ್ಯಾರು ಗಣಪತಿಗೆ ತಾನೇ? ನೇಕಾರ ಜನಾಂಗದೋರು ಇಲಿಗೆ ಪೂಜಿ ಮಾಡ್ತಾರ. ತಮ್ಮ ನೇಯ್ಗಿಯ ಬಟ್ಟೆಗಳ್ನ ಇಲಿ ತಿನ್ಬಾರ್ದು ಅನ್ನದು ಈ ಪೂಜಿ ಉದ್ದೇಶ. ಮೂರ್ ದಿನ ಇಲಿ ಮೂರ್ತಿ ಕುಂದರಿಸಿ, ಹಬ್ಬದ್ ಅಡ್ಗಿ ಉಂಡು, ಆಮ್ಯಾಲೆ ವಿಸರ್ಜನಿ ಮಾಡ್ತಾರ.

ರಾಷ್ಟ್ರೀಯ ಹೆದ್ದಾರಿ 50ರ ಪಕ್ಕಕ್ಕ ಬಿಲ್ ಪತ್ರಿ ಮರ ಐತ್ರಿ, ಅದರ್ ಬುಡಕ್ಕ ತಲಕಾವೇರಿ ಉಗಮ ಆಗ್ತಾಳ. ಇದು ಒರತೆ ನೀರು ಬಾಳ ಸ್ವೀಟ್ ಇರ್ತಾವು. ತಲಕಾವೇರಿ ನೋಡಿಲ್ಲ ಅನ್ನರು ನೋಡಿವಿ ಅನ್ನರು ಇಲ್ಲಿಗೊಮ್ಮೆ ವಿಸಿಟ್ ಮಾಡ್ರಿ. ಅಂಗವಿಕಲತೆ ಶಾಪ ಅನ್ನರು ಇಲ್ಲಿ ಚೂರ್ ಕೇಳ್ರಿ. ಎರಡ್ ಕೈಯಿಲ್ಲ್ದ ಲಕ್ಷ್ಮೀ ಮೇಡಂ ಟೀಚರ್ ಆಗಿ ಕಾಲಿಂದ ಬೋರ್ಡ್ ಮ್ಯಾಲೆ ಬರಿತಾರ. ಪಾಠನೂ ಮಾಡ್ತಾರ. ಶ್ರೀ ಶರಣ ಬಸವೇಶ್ವರ ಸ್ವಾಮಿ ಮಠ ಕಲ್ಲು ಸೀಮೆಯ ಕಾಶಿ ಎಂದೇ ಹೆಸ್ರು ಆಗೈತಿ. ಹೋಟೆಲ್ ಇಲ್ದ್ ಊರು ನಮ್ಮಲ್ಲಿ ಅದಾವ. ಉತ್ತರ ಕರ್ನಾಟಕದ ಭಾಗಕ್ಕ ಗಣಿತ, ವಿಜ್ಞಾನ ಅಂದ್ರ ಕಬ್ಬಿಣ್ದ್ ಕಡ್ಲಿ ಇದ್ದಂಗ. ಇಂತ ಸಬ್ಜೆಕ್ಟ್ ಸಂಗೀತದ್ ಮೂಲ್ಕ ಕಲ್ಸ್ತಾರ ನಮ್ ಶಿಕ್ಷಕರು.

ಗುಣಸಾಗರದ ವೇಣುಗೋಪಾಲ ಸ್ವಾಮಿ, ಕೈವಲ್ಯಾಪುರದ ಅನಂತ ಶಯನ ದೇಗುಲ ಫೇಮಸ್. 1850ರಿಂದ 1947 ಸ್ವಾತಂತ್ರಕ್ಕಾಗಿ ಬಲಿದಾನ ಮಾಡ್ದ ಹುತಾತ್ಮರ ನೆನ್ಪಿಗೆ ಸ್ಮಾರಕ ಕಟ್ಟ್ಯಾರಾ. ಇಲ್ಲಿಗೆ ಈಗ್ಲೂ ಗಣ್ಯ ವ್ಯಕ್ತಿಗಳು ಭೇಟಿ ಕೊಡ್ತಾರ. ಚಿತ್ರದುರ್ಗದ ಕೋಟಿ ಇದ್ದಂಗ ನಮ್ಮಲ್ಲಿ



ಕುರಿಹಿಕ್ಕೆಲಿಂಗೇಶ್ವರ ದೇವಸ್ಥಾನ

## ಮನದ ಭಾಷೆಯ 'ಚೆನ್ನುಡಿ'

'ನಾವಾಡುವ ನುಡಿಯೇ ಕನ್ನಡ ನುಡಿ' ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ 'ಚೆನ್ನುಡಿ' ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಕರ್ನಾಟಕದ ವಿವಿಧ ಜಿಲ್ಲೆಗಳ ನುಡಿಸೊಬಗನ್ನು ಪರಿಚಯಿಸುತ್ತಿರುವ 'ಚೆನ್ನುಡಿ' ಅಂಕಣಕ್ಕೆ ನೀವೂ ಬರೆಯಬಹುದು. ನಿಮ್ಮೂರಿನ ಭಾಷೆಯ ಸೊಗಡನ್ನು ಓದುಗರೊಂದಿಗೆ ಹಂಚಿಕೊಳ್ಳಬಹುದು. ಲೇಖನ 1000 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿರಲಿ.
ಇಮೇಲ್– **editorsu@sudha.co.in**